ಔರದಾ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆ

1009 (1687) ಶ್ರೀ ಗುರುಪಾದಪ್ಪ ನಾಗ್ಮಾರಪಲ್ಲಿ (ಔರದ್) : ಮಾನ್ಯ ಗ್ರಾಮಾಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭೀಕರ ಬರಗಾಲದಿಂದಾಗಿ ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಔರಾದ್ ತಾಲ್ಲೂಕಿನ ಒಟ್ಟು 149 ಹಳ್ಳಿಗಳ ಪೈಕಿ ಎಷ್ಟು ಹಳ್ಳಿಗಳಲ್ಲಿ ಬರಪರಿಸ್ಥಿತಿ, ಕುಡಿಯುವ ನೀರಿನ ಸಮಸ್ಯೆ ಇರುವುದು.

ಇ) ಬರಪೀಡಿತ ಹಳ್ಳಿಗಳಲ್ಲಿ ಕುಡಿಯುವ ನೀರಿನ ಪೂರೈಕೆಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಈ) ಸರ್ಕಾರವು ಔರಾದ್ ತಾಲ್ಲೂಕಿನಲ್ಲಿ ಬರಪರಿಹಾರ ಕಾಮಗಾರಿಗಳನ್ನು ಕೈಗೊಂಡಿದೆಯೇ?

ಉ) ಹಾಗಿದ್ದಲ್ಲಿ, ವಿವರಗಳನ್ನು ನೀಡುವುದು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗ್ರಾಮಾಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು) :

ಅ) ಹೌದು.

ಆ) ಔರಾದ್ ತಾಲ್ಲೂಕಿನ 51 ಹಳ್ಳಿಗಳನ್ನು ಕುಡಿಯುವ ನೀರಿನ ಸಮಸ್ಯೆ ಇರುವ ಹಳ್ಳಿಗಳೆಂದು ಗುರುತಿಸಿದೆ.

ಇ) 39 ಕೊಳವೆ ಬಾವಿಗಳಿಗೆ ಮಂಜೂರಾತಿ ನೀಡಿದ್ದು ಇವುಗಳ ಪೈಕಿ 29 ಕೊಳವೆ ಬಾವಿಗಳನ್ನು ಈಗಾಗಲೇ ಕೊರೆಯಲಾಗಿದೆ. 8 ತೆರೆದ ಬಾವಿಗಳ ಆಳವನ್ನು ಹೆಚ್ಚಿಸುವ ಕಾರ್ಯ ಪ್ರಗತಿಯಲ್ಲಿದೆ. 13 ಕಿರು ನೀರು ಸರಬಾರಜು ಯೋಜನೆಗಳನ್ನು ಕೈಗೊಂಡಿದ್ದು 4 ಯೋಜನೆಗಳನ್ನು ಈಗಾಗಲೇ ಪೂರ್ಣಗೊಳಿಸಲಾಗಿದೆ. ಔರಾದ್ ತಾಲ್ಲೂಕಿನಲ್ಲಿನ ಕುಡಿಯುವ ನೀರಿನ ಸಮಸ್ಯೆಯನ್ನು ನಿವಾರಿಸಲು ರೂ. 25.10 ಲಕ್ಷಗಳನ್ನು ಮಂಜೂರು ಮಾಡಿದೆ.

ಈ) ಹೌದು

ಉ) ಉದ್ಯೋಗ ಸೃಜನೆಗಾಗಿ ಪರಹರಿಹಾರ ಕಾರ್ಯಕ್ರಮದಡಿ ಕೈಗೊಂಡಿರುವ 4 ಕಾಮಗಾರಿಗಳ ವಿವರ ಈ ಕೆಳಕಂಡಂತೆ ಇರುತ್ತದೆ :

1)	ಮಲೆಗಾಂವ್ ಹಳ್ಳಿಯಲ್ಲಿನ ಪರ್ಕೊಲೇಷನ್ ಟ್ಯಾಂಕ್‌ಗೆ	ರೂ. 2.00 ಲಕ್ಷ
2)	ವಡಗಾಂವ ಹಳ್ಳಿ ಗೊಕಟ್ಟಾ ದುರಸ್ತಿಗೆ	ರೂ. 2.65 ಲಕ್ಷ
3)	ಚಿಂಟಕಿ ಗ್ರಾಮದಲ್ಲಿ ನಾಲಾಬಂದ್-1 ನಿರ್ಮಾಣಕ್ಕೆ	ರೂ. 1.80 ಲಕ್ಷ
4)	ಚಿಂಟಕಿ ಗ್ರಾಮದ ತಾಂಡಾ ನಾಲಾ ಬಂದ್-2 ನಿರ್ಮಾಣಕ್ಕೆ	ರೂ. 1.80 ಲಕ್ಷ
	ಒಟ್ಟು	**ರೂ. 8.26 ಲಕ್ಷ**